ಶ್ರೀ ಎಂ.ಎಸ್. ಪಾಟೀಲ್.—ಪರಿಶೀಲನೆ ಮಾಡುವುದು ಬೇಡ. ಬೇರೆ ಕಡೆ ಶಾಲೆ ಪ್ರಾರಂಭಿಸಲು ರಿಪೋರ್ಟ್ ತರಿಸಿಕೊಂಡಿದ್ದೀರಿ. ನಾನು ಇವತ್ತು ಕೇಳುತ್ತಿದ್ದೇನೆ, ತಾವು ಗಡಿ ಪ್ರದೇಶಕ್ಕೆ ಬಂದಿಲ್ಲ, ದಯಮಾಡಿ ಬರಬೇಕು, ನೋಡಬೇಕು, ತಾವು ನಿರ್ಣಯ ಕೊಡಬೇಕು, ಇಲ್ಲದೇಹೋದರೆ ಅಧಿಕಾರಿಗಳು ಒತ್ತಾಯಕ್ಕೆ ಮಣಿದು ಕಾರ್ನರ್ ಪ್ಲೇಸ್‌ನಲ್ಲಿ ಕೊಡುತ್ತಾರೆ. ಸಂಕೇಶ್ವರ ಗಡಿ ಭಾಗದಲ್ಲಿರತಕ್ಕಂಥಾದ್ದು, ಆ ಊರಿನಲ್ಲಿ ಶಾಲೆಯನ್ನು ಕೊಟ್ಟರೆ ಒಳ್ಳೆಯದು, ಉಪಯೋಗವಾಗುತ್ತದೆ. ಆದ್ದರಿಂದ ಈ ಬಗ್ಗೆ ಕೇಂದ್ರಸರ್ಕಾರಕ್ಕೆ ಶಿಫಾರಸುಮಾಡಿ ಕಳಿಸುಕೊಡುತ್ತೀರಾ ? ಅಲ್ಲದೆ ನಮ್ಮ ಸಂಸ್ಥೆಯನ್ನು ಕೇಳಲಿಲ್ಲ. ಯಾರೋ ಒಬ್ಬರಿಗೆ ಮಾಹಿತಿ ಕೇಳಿದ್ದಾರೆ, ಅವರು ಕಳಿಸಿದ್ದಾರೆ, ಇವರಿಗೆ ಗೊತ್ತೇ ಇಲ್ಲ.

ಶ್ರೀ ಡಿ. ಮಂಜುನಾಥ್.—ಆ ಒಂದು ಸಮಿತಿಯಲ್ಲಿ ಕೇಂದ್ರ ಸರ್ಕಾರದ ಅಧಿಕಾರಿಗಳು ಮತ್ತು ನಮ್ಮ ರಾಜ್ಯಸರ್ಕಾರದ ಕೆಲವು ಅಧಿಕಾರಿಗಳು ಇರುತ್ತಾರೆ. ಅವರು ನೋಡಿ ಹೇಳುವ ಜಾಗವನ್ನು ಪರಿಶೀಲನೆಮಾಡಿ ಸರಿಯಾಗಿದ್ದರೆ ಶಿಫಾರಸ್ಸು ಮಾಡುತ್ತೇವೆ.

## ಶಿವಮೊಗ್ಗ ತಾಲ್ಲೂಕು ನಿಧಿಗೆ ಹೋಬಳಿಯಲ್ಲಿ 'ಜಾರ್ಗಲ್ ಹಳ್ಳ ಯೋಜನೆ' ಕಾರ್ಯಗತ ಮಾಡುವ ವಿಚಾರ

ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ):—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೬-೮೭ರ ಆಯವ್ಯಯದಲ್ಲಿ ಶಿವಮೊಗ್ಗ ತಾಲ್ಲೂಕು ನಿಧಿಗೆ ಹೋಬಳಿಯಲ್ಲಿನ 'ಜಾರ್ಗಲ್ ಹಳ್ಳ ಯೋಜನೆ' ಸೇರಿರುವುದು ನಿಜವೇ ?

ಆ) ಸದರಿ ಯೋಜನೆ ಬಹಳ ಹಿಂದೆಯೇ ಮಂಜೂರಾಗಿದ್ದು ಈವರೆಗೂ ಕಾರ್ಯಗತವಾಗದೇ ಇರುವುದರಿಂದ ಭದ್ರಾ ಯೋಜನೆಯಲ್ಲಿ ಸ್ಥಳಾಂತರಗೊಂಡ ರೈತರಿಗೆ ನೀರಾವರಿ ಸೌಲಭ್ಯ ಸಿಗದೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲು ವಿಳಂಬವಾಗುವುದಕ್ಕೆ ಕಾರಣಗಳೇನು ?

ಈ) ಯೋಜನೆಯ ಕಾರ್ಯವನ್ನು ತಕ್ಷಣವೇ ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಹೌದು.

ಇ) ಅವಶ್ಯಕವಾದ ಅರಣ್ಯ ಭೂಮಿಯ ಬಿಡುಗಡೆಯಾಗದೇ ಇರುವುದರಿಂದ.

ಈ) ಅರಣ್ಯ ಭೂಮಿಯ ಬಿಡುಗಡೆಯಾದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಸ್ವಾಮಿ, ಶಿವಮೊಗ್ಗ ತಾಲ್ಲೂಕು ನಿಧಿಗೆ ಹೋಬಳಿಯಲ್ಲಿನ ಜಾರ್ಗಲ್ ಹಳ್ಳ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡಲಾಗಿದೆಯೆ ?

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ, ಈ ಯೋಜನೆ ಸಂಪಾರು ಹಂತದಲ್ಲಿ ಬದಲಾವಣೆಯಾಗಿದೆ. ೧೯೭೯ರಲ್ಲಿ ಅಂದಿನ ಸರ್ಕಾರದವರು ಮಂಜೂರಾತಿ ಕೊಟ್ಟರು, ಈ ಯೋಜನೆಗಾಗಿ ೨೪೮ ಎಕರೆ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡಬೇಕೆಂದು ನಿರ್ಣಯ ಮಾಡಿದ್ದರು. ಇದರಲ್ಲಿ ೭೮ ಎಕರೆ ಕೆರೆ ಕಟ್ಟುವುದಕ್ಕೋಸ್ಕರ, ೧೭೦ ಎಕರೆ ಅರಣ್ಯ ಪ್ರದೇಶವನ್ನು ಸೇರಿಸಿಕೊಂಡು ಪ್ರಾಜೆಕ್ಟ್ ಕಟ್ಟಬೇಕೆಂದು ಡಿಸೈಡ್ ಮಾಡಿದ್ದರು. ಹೆಚ್ಚುವರಿಯಾಗಿ ಅಂದರೆ, ಸವದಂತಿ ಕೆರೆ ಮತ್ತು ತೋಟದ ಕೆರೆ ಜಮೀನುಗಳನ್ನು ಸೇರಿಸಿ, ಒಟ್ಟು ೩೦೦ ಎಕರೆ ಜಮೀನು ನೀರಾವರಿಯಾಗುತ್ತದೆಯೆಂದೂ, ಇದರಲ್ಲಿ ಅರಣ್ಯ ಭೂಮಿ ಕೂಡ ಸೇರುತ್ತದೆಯೆಂದು ಕೆಲಸ ಪ್ರಾರಂಭ ಮಾಡಿದ್ದರು. ಆ ಕಾಲದಲ್ಲಿ ಈ ಯೋಜನೆಗೆ ೧ ಲಕ್ಷ ೨೨ ಸಾವಿರದ ೬೯೭ ರೂಪಾಯಿಗಳನ್ನು ಖರ್ಚು ಮಾಡಿದ್ದರು. ಅರಣ್ಯ ಇಲಾಖೆಯವರು ಬಹಳ

ಸೀರಿಯಸ್ಸಾಗಿ ಅಬ್ಜೆಕ್ಷನ್ ತೆಗೆದುಕೊಂಡು ಈ ಯೋಜನೆಯನ್ನು ಇಲ್ಲಿ ಕಟ್ಟುವುದಕ್ಕಾಗುವುದಿಲ್ಲವೆಂದು ಹೇಳಿದ ಮೇಲೆ ಕೆಲಸ ನಿಲ್ಲಿಸಿದರು. ಇದಾದ ಮೇಲೆ ೧೯೮೦ರಲ್ಲಿ ಯೋಜನೆಗೆ ಬದಲಾಗಿ ಒಂದು ಪಿಕಪ್ ಮಾಡಲಿಕ್ಕೆ ಪರಿಶೀಲನೆ ಪ್ರಾರಂಭವಾಯಿತು. ಪಿಕಪ್ ಮಾಡುವುದಾದರೆ, ೨೩ ಎಕರೆ ಮಾತ್ರ ಅರಣ್ಯ ಇಲಾಖೆಯ ಭೂಮಿ ಹೋಗುತ್ತದೆಂದು ಒಂದು ನಿರ್ಣಯಕ್ಕೆ ಬಂದರೂ, ಅದಕ್ಕೂ ಕೂಡ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಸೀರಿಯಸ್ ಅಬ್ಜೆಕ್ಷನ್ ತೆಗೆದುಕೊಂಡಿದ್ದರು. "The proposed pick-up site across Jargalhalla in Shimoga Taluk is deep inside the state forest and will seriously affect the surrounding forest and the wild life to the increase of human interference. The request for release of 23 acres of forest land cannot be considered." ಇದನ್ನು ಆಗಲೇ ಹೇಳಿದ್ದರು ನಮ್ಮ ಸರ್ಕಾರ ಬಂದ ಮೇಲೆ ಮಾನ್ಯ ಸದಸ್ಯರು ೪-೬ ಬಾರಿ ನನಗೆ ಈ ಯೋಜನೆಯನ್ನು ಮಾಡಲೇಬೇಕೆಂದು ಹೇಳಿದ ಮೇಲೆ, ಅಲ್ಲಿ ನೀರಿನ ಅಂಶ ಕೂಡ ಹೆಚ್ಚು ಪ್ರಮಾಣದಲ್ಲಿರುವುದರಿಂದ ಇದರ ಬಗ್ಗೆ ಪುನಃ ಆಲೋಚನೆ ಮಾಡಬೇಕಾಗಿ ಬಂದು ಅದರ ಪ್ರಕಾರ ಒಂದು ಎಸ್ಟಿಮೇಟ್ ಮಾಡಲಾಗಿದೆ. ಅದನ್ನು ಪರಿಗಣನೆಗೆ ತೆಗೆದುಕೊಂಡರೆ, ೮ ಎಕರೆ ಮಾತ್ರ ಫಾರೆಸ್ಟ್ ಲ್ಯಾಂಡ್ ಬೇಕಾಗುತ್ತದೆಂದು ಹೇಳಿದ್ದಾರೆ. ಈ ಯೋಜನೆಗೆ ಆಗತಕ್ಕ ಒಟ್ಟು ವೆಚ್ಚ ೧೪ ಲಕ್ಷದ ೪೦ ಸಾವಿರ ರೂಪಾಯಿಗಳು. ಈ ಯೋಜನೆಗೆ ಸಂಬಂಧಪಟ್ಟಂತೆ ನೀರಾವರಿ ಕಾರ್ಯದರ್ಶಿಯವರು, ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದ್ದಾರೆ ಅರಣ್ಯ ಇಲಾಖೆಯವರು ಕೂಡ ಒಪ್ಪಿಗೆ ಕೊಡುವುದಕ್ಕೆ ಮುಂದೆಬಂದಿದ್ದಾರೆ. ಈ ಯೋಜನೆಗೆ ಕೇಂದ್ರ ಸರ್ಕಾರದ ಪರವಾನಗಿ ತೆಗೆದುಕೊಳ್ಳಬೇಕಾಗಿದೆ. ಇರತಕ್ಕ ಪರಿಸ್ಥಿತಿ ಇಷ್ಟು. ಬಜೆಟ್ಟಿನಲ್ಲಿ ಒಂದು ಲಕ್ಷದ ೫೫ ಸಾವಿರ ರೂಪಾಯಿಗಳನ್ನು ಈ ಯೋಜನೆಗೆ ಪ್ರಾವಿಜನ್ ಮಾಡಲಾಗಿದೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಈಗ ಇರುವುದು ಕೇವಲ ೮ ಎಕರೆ, ಅದರಲ್ಲೂ ಕೂಡ ಚಾನಲ್ ತೆಗೆಯಲಿಕ್ಕೆ ಎಷ್ಟು ೫ ಎಕರೆ. ಮರಗಳು ನಾಶವಾಗುವುದಿಲ್ಲ ಎಂದು ವರದಿ ಇದೆ. ಕೇಂದ್ರ ಸರ್ಕಾರಕ್ಕೆ ಈಗಾಗಲೇ ತಾವು ಪರ್‌ಮಿಷನ್ ಕೊಡುವುದಕ್ಕೆ ಬರೆದಿದ್ದೀರಾ ? ತಾವು ಬರೆಯದೇ ಇದ್ದರೆ ಈಗಲಾದರೂ ಬರೆಯುತ್ತೀರಾ ? ಎಷ್ಟು ದಿವಸದೊಳಗೆ ಒಂದು ಪರವಾನಿಗೆ ತರಿಸುತೀರಾ ? ಭದ್ರಾ ಯೋಜನೆಗೋಸ್ಕರ ಮುಳುಗಡೆಯಾದಾಗ ಸ್ಥಳಾಂತರಿಸಲಿಕ್ಕೆ ಜಮೀನು ಕೊಟ್ಟರು. ನೀರಾವರಿಗೆ ಅನುಕೂಲ ಮಾಡಿಕೊಡುತ್ತೇವೆಂದು ೨೦ ವರ್ಷದ ಹಿಂದೆ ಮಾಡಿಕೊಟ್ಟರೂ ಯೋಜನೆ ಆಗಿಲ್ಲ. ಡ್ರೈ ಲ್ಯಾಂಡ್‌ನಲ್ಲಿ ಏನೂ ಬೆಳೆಯುವುದಿಲ್ಲ. ಈ ದೃಷ್ಟಿಯಿಂದ ಹೇಳುವುದಾದರೆ ಸರ್ಕಾರದ ಒಂದು ಕಮಿಟ್‌ಮೆಂಟ್ ಕೂಡ ಇದೆ ಈ ಜನಗಳಿಗೆ. ಆದ್ದರಿಂದ ಇದನ್ನು ಈಡೇರಿಸಿಕೊಡುವುದಕ್ಕೆ ತಾವೇ ಖುದ್ದಾಗಿ ಪರಿಶೀಲಿಸಿಕೊಂಡು ಮಾಡಿಕೊಡುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಈ ಸೆಷನ್ ಮುಗಿದ ಮೇಲೆ ನಾನು ಅವರ ಜೊತೆ ಹೋಗಿ ಸ್ಥಳ ಪರೀಶೀಲನೆ ಮಾಡುತ್ತೇನೆ. ಒಂದು ಮರ ಸಹ ಹೋಗದ ರೀತಿ ಚಾನಲ್ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯ ಇದ್ದರೆ ಕೇಂದ್ರ ಸರ್ಕಾರಕ್ಕೆ ಬರೆದು ಮಾಡಿಸುತ್ತೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮರಗಳು ಹೋಗುವುದಿಲ್ಲ ಎಂದು ಇದರಲ್ಲಿ ಇದೆ.

ಶ್ರೀ ಹೆಚ್.ಡಿ. ದೇವೇಗೌಡ.—ಅವರು ನಾವು ಜೊತೆಯಲ್ಲಿ ಹೋಗೋಣ. ಕೇಂದ್ರ ಸರ್ಕಾರದ ಇವೊತ್ತಿನ ಆದೇಶದ ಪ್ರಕಾರ ನಾವು ಒಂದು ಗುಂಟೆ ಫಾರೆಸ್ಟ್ ಲ್ಯಾಂಡ್ ಸಬ್‌ಮರ್ಜ್ ಮಾಡತಕ್ಕ ಅಧಿಕಾರ ಇಲ್ಲ. ಇದರ ಬಗ್ಗೆ ಪ್ರಧಾನ ಮಂತ್ರಿಗಳು ಕಟ್ಟುನಿಟ್ಟಾದ ಆದೇಶವನ್ನು ಕೊಟ್ಟಿದ್ದಾರೆ, ಇದು ಈಗ ಇರತಕ್ಕ ಪರಿಸ್ಥಿತಿ. ಒಂದೂ ಮರ ಹೋಗುವುದಿಲ್ಲ ಎಂದು ಹೇಳುವುದು ವಾಸ್ತವಾಂಶ ಇದ್ದರೆ ಬರೆದು ತಿಳಿಸುತ್ತೇನೆ. ಅಲ್ಲಿರತಕ್ಕ ಜಲಸಂಪತ್ತನ್ನು ಈ ಕೆರೆಗಳಿಗೆ ತೆಗೆದುಕೊಂಡು ಹೋಗ ತಕ್ಕ ಕೆಲಸವನ್ನು ಮಾಡಬೇಕಾಗುತ್ತದೆ. ಈ ಕೆಲಸ ತೆಗೆದುಕೊಳ್ಳುವುದಕ್ಕೆ ಎಷ್ಟೆಲ್ಲಾ ಪ್ರಯತ್ನ ಮಾಡಬೇಕೋ ಅದನ್ನು ಮಾಡಲು ನೋಡೋಣ.

ಚು.ಪ್ರ. ೩೧೪ ಮಾನ್ಯ ಸದಸ್ಯರು ಗೈರುಹಾಜರು
ಚು.ಪ್ರ. ೩೪೫ ಮಾನ್ಯ ಸದಸ್ಯರು ಗೈರುಹಾಜರು